# 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
# ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS-180 /2023** **PW-1**

**ದಿಃ 29.05.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಜಿ ಎಸ್ ಎಂ ವಕೀಲರಿಂದಃ**

**1.** ನಾನು ಕೊಟ್ಟ ಮಾಹಿತಿಯಂತೆ ನನ್ನ ವಕೀಲರು ನನ್ನ ಪ್ರಮಾಣ ಪತ್ರವನ್ನು ತಯಾರಿಸಿ ಸಲ್ಲಿಸಿರುತ್ತಾರೆ. ತಮ್ಮ ಘರಾಣೇದ ಮೂಲ ಉದ್ಯೋಗವು ಜವಳಿ ವ್ಯಾಪಾರ ಎಂದರೆ ಸರಿ. ಶಿವಪ್ಪ ರವರ ತಂದೆಯು ಸಹ ವ್ಯಾಪಾರ ಮಾಡುತ್ತಿದ್ದರೆಂದರೆ ಸರಿ. ಸಿಟಿಸರ್ವೆ ನಂಃ 2671 ಮತ್ತು 2672 ಆಸ್ತಿಗಳು ತಮ್ಮ ಘರಾಣೇದ ಆಸ್ತಿಗಳೇಂದರೆ ಸಾಕ್ಷಿಯು ನನ್ನ ತಾತನವರು ಸ್ವಯಾರ್ಜಿತವಾಗಿ ಸಿಟಿಎಸ್ ನಂಃ 2672 ನ್ನು ಸಂಪಾದಿಸಿರುತ್ತಾರೆಂದು ನುಡಿಯುತ್ತಾರೆ. ಚನ್ನಮಲ್ಲಪ್ಪ ಮತ್ತು ವೀರಣ್ಣ ತಮ್ಮ ಅಜ್ಜನವರ ಮಕ್ಕಳೆಂದರೆ ಸರಿ. ಚನ್ನಮಲ್ಲಪ್ಪ ರವರ ಮಕ್ಕಳನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಲು ಯಾವದೇ ತೊಂದರೆ ಇಲ್ಲ ಎಂದರೆ ಸಾಕ್ಷಿಯು ವಿಭಾಗ ಆದ ಕಾರಣ ಅವರು ಅಗತ್ಯ ಇಲ್ಲ ಎನ್ನುತ್ತಾರೆ.

2. ಅಬಿಷೇಕ ಫಾರ್ಮಾದ ಮಾಲೀಕರು ತಾವೇ ಆಗಿರುತ್ತೀರಿ ಎಂದರೆ ಸರಿ. ಅಬಿಷೇಕ ಫಾರ್ಮಾದಲ್ಲಿ ಬಂಡವಾಳ ಹೂಡಲು ಬೈಲಹೊಂಗಲ ಬ್ಯಾಂಕನಲ್ಲಿ ಸಾಲ ಮಾಡಲಾಗಿತ್ತು ಎಂದರೆ ಸರಿಯಲ್ಲ. ಬೈಲಹೊಂಗಲದ ಬ್ಯಾಂಕನಲ್ಲಿ ತಮ್ಮ ತಂದೆಯವರು ಯಾವ ಕಾರಣಕ್ಕಾಗಿ ಸಾಲ ಮಾಡಿದ್ದರೆಂಬುದು ನನಗೆ ಗೊತ್ತಿಲ್ಲ. ತಮ್ಮ ತಂದೆಯವರು ಅಬಿಷೇಕ ಫಾರ್ಮಾದ ಉದ್ದೇಶಕ್ಕಾಗಿಯೇ ಬೈಲಹೊಂಗಲ ಬ್ಯಾಂಕನಲ್ಲಿ ಸಾಲ ಮಾಡಿದ್ದು ಸದರಿ ಬ್ಯಾಂಕು ಕರ್ನಾಟಕ ಬ್ಯಾಂಕನಲ್ಲಿ ವಿಲೀನಗೊಂಡಿದ್ದು ಈಗಲೂ ಸಹ ತಮ್ಮ ಕರೆಂಟ ಅಕೌಂಟನಲ್ಲಿ ಒ ಡಿ ಇರುತ್ತದೆಂದರೆ ಸರಿಯಲ್ಲ. ತಮ್ಮ ವ್ಯಾಪಾರದ ಅಬಿವೃದ್ದಿಗಾಗಿಯೇ ಸಾಲವನ್ನು ಮಾಡಲಾಗಿತ್ತು ಎಂದರೆ ಸರಿಯಲ್ಲ.

ಈ ಸಂದರ್ಬದಲ್ಲಿ ಪ್ರತಿವಾದಿಯರ ಪರ ವಕೀಲರು ಕೆಲವೊಂದು ದಾಖಲೆಗಳ ಮೇಲೆ ಹೆಚ್ಚಿನ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**